# ಎನ್ಐಟಿಕೆ ಸುರತ್ಕಲ್ ಆಡಳಿತ ಮಂಡಳಿ

# ಅಜಿತ್ ಕುಮಾರ್ ರೈ ನಾಮನಿರ್ದೇಶನ



ಮಂಗಳೂರು, ನ. 8: ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್ಐಟಿಕೆ) ಸುರತ್ಕಲ್‌ನ ಆಡಳಿತ ಮಂಡಳಿಗೆ ರಾಜ್ಯ ಸರಕಾರದ ಪ್ರತಿನಿಧಿಯಾಗಿ ಉದ್ಯಮಿ ಮತ್ತು ಸುಪ್ರಜಿತ್ ಗ್ರೂಪ್‌ನ ಸಂಸ್ಥಾಪಕ ಮತ್ತು ಅಧ್ಯಕ್ಷರಾದ ಕೆ. ಅಜಿತ್ ಕುಮಾರ್ ರೈ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಹಾಗೂ ಕೆನಡಾದ ಡಾಲ್‌ಹೌಸಿ ವಿ.ವಿ.ಯಿಂದ ಕೈಗಾರಿಕಾ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಅವರ ನೇತೃತ್ವದ ಸುಪ್ರಜಿತ್ ಗ್ರೂಪ್ ಆಫ್ ಕಂಪೆನಿಯು ಆಟೋಮೋಟಿವ್ ಲೈಟಿಂಗ್, ಹ್ಯಾಲೊಜೆನ್ ಬಲ್ಬ್‌ಗಳು ಮತ್ತು ಕೇಬಲ್‌ಗಳನ್ನು ತಯಾರಿಸುತ್ತಿದ್ದು ವಿವಿಧ ದೇಶಗಳಲ್ಲಿ ವ್ಯವಹಾರ ಹೊಂದಿದೆ.

ಅಜಿತ್ ರೈ ವಿದ್ಯಾರ್ಥಿ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು, ಶಾಲೆಗಳು ಮತ್ತು ಅಂಗನವಾಡಿಗಳ ಉನ್ನತೀಕರಣಕ್ಕೆ ನೆರವು ವೈದ್ಯಕೀಯ ನೆರವನ್ನು ಒದಗಿಸುತ್ತಿದ್ದಾರೆ.

Udayavani, Date: 09/11/23, p,no - 13